# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ

## ಕೆ ಆರ್ ನಗರ.

## ಸಿ.ಸಿ. ನಂ. 100/2026

ಪಿರ್ಯಾದಿ ಃ ಸರ್ಕಾರದ ಪರ ಕೆ ಆರ್ ನಗರ ಪೋಲೀಸ್ ಠಾಣೆ

ಃವಿರುದ್ಧ ಃ

ಆರೋಪಿ ಃ ಮಹಾದೇವಿ ಬಿನ್ ಲೇಟ್ ಚೆನ್ನ
36 ವರ್ಷ
ವಾಸಃಕಾಳೇನಹಳ್ಳಿ ಗ್ರಾಮ,
ಕೆ.ಆರ್.ನಗರ ತಾಲ್ಲೂಕು
ಮೈಸೂರು ಜಿಲ್ಲೆ.

## ದೋಷಾರೋಪಣೆ

ಶ್ರೀ ಚಂದನ್.ಎಸ್ ಬಿ.ಕಾಮ್.,ಎಲ್.ಎಲ್.ಬಿ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿ ನಾಯಾಧೀಶರು, ಕೆ.ಆರ್.ನಗರ ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಿಸುವುದೇನೆಂದರೆಃ

ದಿನಾಂಕಃ 13-12-2025 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಕೆ.ಆರ್.ನಗರ ಪೊಲೀಸ್ ಠಾಣಾ ಸರಹದ್ದು ಡೋರನಹಳ್ಳಿ ದೊಡ್ಡೆಕೊಪ್ಪಲು ಗ್ರಾಮದ ಮಹಾದೇವ ರವರ ವಾಸದ ಮನೆಯ ಮುಂದೆ ಇರುವ ರಸ್ತೆಯಲ್ಲಿ ಚಾಸಾ-2 ರವರು ವಾಹನ ಸಂಖ್ಯೆ ಕೆಎ-45-ಜೆ-0489 ಟಿವಿಎಸ್ ಎಕ್ಸ ಎಲ್ ಮೋಪೆಡ್ ಸ್ಕೂಟರ್ ನಲ್ಲಿ ರಸ್ತೆಯ ಎಡಬದಿಯಲ್ಲಿ ಹೋಗುತ್ತಿರುವಾಗ ಆರೋಪಿಯಾದ ನೀವು ವಾಹನ ಸಂಖ್ಯೆ ಕೆಎ-45-ಜಿ-ಟಾಟಾ-ಎಸಿಇ ಗೂಡ್ಸ ವಾಹನವನ್ನು ಮಹಾದೇವ ರವರ ವಾಸದ ಮನೆಯ ಕಡೆಯಿಂದ ಕಸವನ್ನು ತುಂಬಿಕೊಂಡು ಡೋರನಹಳ್ಳಿ ಕಡೆಗೆ ಹೋಗಲು ಗೂಡ್ಸ ಆಟೋವನ್ನು ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಕ್ರಾಸ ಮಾಡಿ ಚಾಸಾ-2 ರವರಿಗೆ ಅಪಘಾತಪಡಿಸಿರುತ್ತೀರಿ. ಆ ಮೂಲಕ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ **281** ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರಿ ಎಂದು ಆರೋಪಣೆ ಹೊರಿಸಲಾಗಿದೆ.

ಎರಡನೇಯದಾಗಿ ಮೇಲೆ ಹೇಳಿದ ತಾರೀಖು, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ವಾಹನ ಕೆಎ-45-ಜಿ-ಟಾಟಾ-ಎಸಿಇ ಗೂಡ್ಸ ವಾಹನವನ್ನು ಮಾನವ

ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿದ್ದರಿಂದ ಚಾಸಾ-2 ರವರಿಗೆ ಡಿಕ್ಕಿ ಪಡಿಸಿದ ಪರಿಣಾಮ ಚಾಸಾ-2 ರವರ ತಲೆಗೆ, ಹಣೆಗೆ ಗದ್ದಕ್ಕೆ ಹಾಗೂ ಎಡಕಾಲಿನ ಭಾಗದ ಮೂಳೆ ಮುರಿದು ತೀವ್ರ ಸ್ವರೂಪದ ಗಾಯಗಳಾಗಿರುತ್ತವೆ. ಆ ಮೂಲಕ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ **ಕಲಂ 125(ಬಿ)** ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರಿ ಎಂದು ಆರೋಪಣೆ ಹೊರಿಸಲಾಗಿದೆ.

ಪ್ರಃ 1) ಕನ್ನಡದಲ್ಲಿ ಓದಿ ಹೇಳಿದ ಮೇಲಿನ ದೋಷಾರೋಪಣೆ ಅರ್ಥವಾಯಿತೇ?
ಉಃ ಅರ್ಥವಾಯಿತು

ಪ್ರಃ 2) ಅಪರಾಧವನ್ನು ಒಪ್ಪಿಕೊಳ್ಳುವಿರೋ ಅಥವಾ ಸಾಕ್ಷಿಗಳ ವಿಚಾರಣೆಯಾಗ ಬಯಸುವಿರಾ?
ಉಃ ಒಪ್ಪಿಕೊಳ್ಳುತ್ತೇನೆ

ಆರೋಪಿಯ ವಿರುದ್ಧ ದೋಷಾರೋಪಣೆ ರಚಿಸಿ ನೇರವಾಗಿ ಓದಿ ತಿಳಿಸಿದ ನಂತರ ಆತನು ಕೊಟ್ಟ ಉತ್ತರವನ್ನೇ ಸರಿಯಾಗಿ ಪಡೆದುಕೊಳ್ಳಲಾಯಿತೆಂದು ದೃಢೀಕರಿಸಿದೆ.

ದಿಃ 16-02-2026

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ.ಗಳು,
ಕೆ ಆರ್ ನಗರ.

**ಆರೋಪಿಯ ಸಹಿಃ**